ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 04–06–2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಗಾನವೆಂಬ ಗಂಧ ಚೆಲ್ಲಿ – ಪುಟ್ಟಣ್ಣ ನೆನಪಿನ ಸಂಗೀತ ಸಂಜೆ:<br><br>ಮುಖ್ಯ ಅತಿಥಿಗಳು:<br><br>ಡಾ. ಎಂ.ಹೆಚ್. ಅಂಬರೀಷ್,<br>ವಸತಿ ಸಚಿವರು.<br><br>ಟಿ.ಎನ್. ಸೀತಾರಾಮ್,<br>ಖ್ಯಾತ ಚಲನಚಿತ್ರ ನಿರ್ದೇಶಕರು<br><br>ಎಸ್.ಆರ್. ವಿಶುಕುಮಾರ್,<br>ನಿರ್ದೇಶಕರು,<br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,<br><br>ಸಾ. ರಾ. ಗೋವಿಂದು,<br>ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ<br><br>ಎಂ. ಎಸ್. ರಮೇಶ್,<br>ಅಧ್ಯಕ್ಷರು,<br>ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘ.<br><br>ಶ್ರೀಮತಿ ಬಿ. ಆರ್. ಛಾಯಾ,<br>ಖ್ಯಾತ ಹಿನ್ನೆಲೆ ಗಾಯಕರು<br><br>ಅಧ್ಯಕ್ಷತೆ:<br><br>ಎಸ್. ವಿ. ರಾಜೇಂದ್ರಸಿಂಗ್ ಬಾಬು,<br>ಅಧ್ಯಕ್ಷರು,<br>ಕರ್ನಾಟಕ ಚಲನಚಿತ್ರ ಅಕಾಡೆಮಿ | 05–06–2016<br>ಭಾನುವಾರ<br>ಸಂಜೆ<br>6–00 ಗಂಟೆಗೆ | ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಹಿಂಭಾಗ, ಜೆ.ಸಿ.ರಸ್ತೆ, ಬೆಂಗಳೂರು. |

| | | | |
|---|---|---|---|
| | ಗೌರವಾರ್ಪಣೆ:<br><br>ಶ್ರೀಮತಿ ನಾಗಲಕ್ಷ್ಮಿ ಪುಟ್ಟಣ್ಣ ಕಣಗಾಲ್ | | |
| 2. | ಮಾಜಿ ಮುಖ್ಯಮಂತ್ರಿ ದಿ. ಡಿ. ದೇವರಾಜ ಅರಸು ಅವರ 34 ನೇ ಪುಣ್ಯತಿಥಿ:<br><br>ಪ್ರತಿಮೆಗೆ ಮಾಲಾರ್ಪಣೆ:<br><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ | 06-06-2016<br>ಸೋಮವಾರ<br>ಬೆಳಿಗ್ಗೆ<br>10-00 ಗಂಟೆಗೆ | ಪಶ್ಚಿಮ ದ್ವಾರದಲ್ಲಿರುವ ದಿ. ದೇವರಾಜು ಅರಸುರವರ ಪ್ರತಿಮೆಯ ಸ್ಥಳ, ವಿಧಾನಸೌಧ, ಬೆಂಗಳೂರು |
| 3. | ಕೃಷಿ ಅಭಿಯಾನ ಪ್ರಚಾರಾಂದೋಲನ:<br><br>ಚಾಲನೆ:<br><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br><br>ಉಪಸ್ಥಿತಿ:<br><br>ಆರ್. ರೋಷನ್ ಬೇಗ್,<br>ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಖಾತೆ ಸಚಿವರು.<br><br>ಕೃಷ್ಣ ಭೈರೇಗೌಡ,<br>ಕೃಷಿ ಖಾತೆ ರಾಜ್ಯ ಸಚಿವರು | 06-06-2016<br>ಸೋಮವಾರ<br>ಬೆಳಿಗ್ಗೆ<br>10-30 ಗಂಟೆಗೆ | ವಿಧಾನ ಸೌಧದ ಮುಂಭಾಗ, (ಗ್ರಾಂಡ್ ಸ್ಟೆಪ್ಸ್) ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಕೃಷಿ ಅಭಿಯಾನ ಪ್ರಚಾರಾಂದೋಲನಕ್ಕೆ ಮುಖ್ಯಮಂತ್ರಿಗಳಿಂದ ಚಾಲನೆ

ಬೆಂಗಳೂರು, ಜೂನ್ 4 (ಕರ್ನಾಟಕ ವಾರ್ತೆ)

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಕೃಷಿ ಇಲಾಖೆ ಸಹಯೋಗದಲ್ಲಿ ಕೃಷಿ ಅಭಿಯಾನ ಪ್ರಚಾರಾಂದೋಲನಕ್ಕೆ ಜೂನ್ 6 ರಂದು ಬೆಳಿಗ್ಗೆ 10-30 ಗಂಟೆಗೆ ಚಾಲನೆ ನೀಡಲಾಗುವುದು.

**ಬೆಂಗಳೂರು ವಿಧಾನಸೌಧ ಮುಂಭಾಗದ (ಗ್ರಾಂಡ್ ಸ್ಟೆಪ್ಸ್) ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಚಾರಾಂದೋಲನಕ್ಕೆ ಚಾಲನೆ ನೀಡುವರು. ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಖಾತೆ ಸಚಿವ ಆರ್. ರೋಷನ್ ಬೇಗ್, ಕೃಷಿ ಖಾತೆ ರಾಜ್ಯ ಸಚಿವ ಕೃಷ್ಣ ಭೈರೇಗೌಡ ಚಾಲನೆ ಸಮಾರಂಭದಲ್ಲಿ ಪಾಲ್ಗೊಳ್ಳುವರು.**

**ಕೃಷಿ ಅಭಿಯಾನ ಕಾರ್ಯಕ್ರಮವು " ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ " ವಿಷಯವನ್ನು ಹೊಂದಿದೆ. ಈ ಕಾರ್ಯಕ್ರಮದನ್ವಯ ರಾಜ್ಯದ 30 ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರತಿದಿನ ಎರಡು ಕಾರ್ಯಕ್ರಮಗಳಂತೆ 20 ದಿನಗಳ ಕಾಲ ಕೃಷಿ ಅಭಿವೃದ್ಧಿ ಪ್ರಚಾರಾಂದೋಲನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಈ ಅವಧಿಯಲ್ಲಿ ಕೃಷಿ ಸಂಬಂಧಿಸಿದಂತೆ ಬೀದಿನಾಟಕಗಳನ್ನು ಸಹ ಹಮ್ಮಿಕೊಳ್ಳಲಾಗಿದೆ.**

**ಕೃಷಿ ಅಭಿಯಾನ 'ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ' 2016-17ನೇ ಸಾಲಿನಲ್ಲಿ ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಶ್ರಯದಲ್ಲಿ ಕೃಷಿ ಮತ್ತು ವಿವಿಧ ಅಭಿವೃದ್ಧಿ ಇಲಾಖೆಗಳ ಸಮನ್ವಯದಲ್ಲಿ ಸಮಗ್ರ ಕೃಷಿ ಮಾಹಿತಿಯನ್ನು ರೈತರಿಗೆ ಒದಗಿಸುವ ಉದ್ದೇಶದಿಂದ 'ಕೃಷಿ ಅಭಿಯಾನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.**

**ಕೃಷಿ ಅಭಿಯಾನದ ಉದ್ದೇಶ:**

- ಸಮಗ್ರ ಕೃಷಿ ಮಾಹಿತಿಯನ್ನು ರೈತರಿಗೆ ತಲುಪಿಸುವುದು.
- ಉತ್ಪಾದಕತೆ ಹೆಚ್ಚಿಸುವ ತಾಂತ್ರಿಕತೆಗಳ ಮನವರಿಕೆ.
- ವಿಜ್ಞಾನಿಗಳೊಂದಿಗೆ ರೈತರ ಸಂವಾದ.

**ಕೃಷಿ ಅಭಿಯಾನ ಮೂರು ಪ್ರಮುಖ ಘಟಕಗಳನ್ನೊಳಗೊಂಡಿರುತ್ತದೆ.**

- ಸಮಗ್ರ ಕೃಷಿ ಮಾಹಿತಿ ಘಟಕ
- ಕೃಷಿ ವಸ್ತು ಪ್ರದರ್ಶನ
- ರೈತ ಸಂವಾದ

**ಅವಧಿ:** ಏಪ್ರಿಲ್ ರಿಂದ ಜೂನ್ 2016

**ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಇಲಾಖೆಗಳೆಂದರೆ** ಕೃಷಿ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ, ಪಶುಪಾಲನೆ, ಸಹಕಾರ, ಕಂದಾಯ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳ ವಿಜ್ಞಾನಿಗಳು, ಸಾಲ ಸೌಲಭ್ಯ ನೀಡುವ ಸಂಸ್ಥೆಗಳು, ಪ್ರಗತಿಪರ ರೈತರು, ಜನ ಪ್ರತಿನಿಧಿಗಳು, ಕೃಷಿ ಪರಿಕರ ಸರಬರಾಜುದಾರರು, ಸಾವಯವ ಕೃಷಿ ಸಂಘಗಳು, ಸ್ವಸಹಾಯ ಗುಂಪುಗಳು, ಸರ್ಕಾರೇತರ ಸಂಸ್ಥೆಗಳು ಇತ್ಯಾದಿ. ಜಿಲ್ಲಾ, ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಕಾರ್ಯತಂಡಗಳನ್ನು ರಚಿಸಲಾಗಿದೆ. ಕೃಷಿ ಅಭಿಯಾನ ಕಾರ್ಯಕ್ರಮವನ್ನು ಹೋಬಳಿ ಮಟ್ಟದಲ್ಲಿ ಮೂರು ದಿನಗಳ ಕಾಲ ಹಮ್ಮಿಕೊಳ್ಳಲಾಗುತ್ತದೆ.

ಮೊದಲ ಮತ್ತು ಎರಡನೇ ದಿನ: ಹೋಬಳಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿವಾರು ವಿಜ್ಞಾನಿಗಳು ಹಾಗೂ ಅಧಿಕಾರಿಗಳನ್ನೊಳಗೊಂಡ ತಂಡಗಳಿಂದ ವಿವಿಧ ಇಲಾಖಾ ಯೋಜನೆಗಳ ಬಗ್ಗೆ ಪ್ರಚಾರ

ಹಾಗೂ ರೈತರೊಂದಿಗೆ ಸಂವಾದ. **ಮೂರನೇ ದಿನ:** ಹೋಬಳಿ ಕೇಂದ್ರ ಸ್ಥಾನದಲ್ಲಿ ಕೃಷಿ ವಸ್ತು ಪ್ರದರ್ಶನ, ಬೆಳೆವಾರು ಸಮಸ್ಯೆಗಳ ಚರ್ಚೆ ಹಾಗೂ ಪರಿಹಾರೋಪಾಯ ಸೂಚಿಸುವುದು, ವಿವಿಧ ಇಲಾಖೆಗಳ ಯೋಜನೆಗಳನ್ನು ಬಿಂಬಿಸುವ ಪ್ರದರ್ಶಿಕೆಗಳು, ಮಾದರಿಗಳು, ಪ್ರಾತ್ಯಕ್ಷಿಕೆಗಳು, ಕಿರುಚಿತ್ರ ಪ್ರದರ್ಶನ ಇತ್ಯಾದಿ.

**ಕೃಷಿ ಅಭಿಯಾನದಲ್ಲಿ ರೈತರಿಗೆ ಈ ಕೆಳಕಂಡಂತೆ ಮಾಹಿತಿ ನೀಡಲಾಗುತ್ತದೆ:**

- ವಿವಿಧ ಇಲಾಖೆಗಳಲ್ಲಿ ರೈತರಿಗೆ ದೊರೆಯುವ ಸವಲತ್ತುಗಳ ಮಾಹಿತಿ, ಕರಪತ್ರಗಳ ವಿತರಣೆ
- ತಜ್ಞರೊಂದಿಗೆ ರೈತರ ಸಂವಾದ
- ತಾಂತ್ರಿಕ ಕಿರುಚಿತ್ರ ಪ್ರದರ್ಶನ
- ಹೊಸ ತಂತ್ರಜ್ಞಾನ ಪರಿಚಯ
- ಪ್ರಗತಿಪರ ರೈತರ ಅನುಭವ ಹಂಚಿಕೆ
- ವಿಷಯ ತಜ್ಞರಿಂದ ಕಿರು ಉಪನ್ಯಾಸ
- ಸವಲತ್ತುಗಳ ಸಾಂಕೇತಿಕ ವಿತರಣೆ ಹಾಗೂ ಕೃಷಿ ವಸ್ತು ಪ್ರದರ್ಶನ ಏರ್ಪಡಿಸಲಾಗುತ್ತದೆ.

ಬಾಬು/ಕೆಎಂ

# "ಗಾನವೆಂಬ ಗಂಧ ಚೆಲ್ಲಿ'...... ಪುಟ್ಟಣ್ಣ ನೆನಪಿನ ಸಂಗೀತ ಸಂಜೆ

**ಬೆಂಗಳೂರು, ಜೂನ್ 4 (ಕರ್ನಾಟಕ ವಾರ್ತೆ)**

**ಕರ್ನಾಟಕ ಚಲನಚಿತ್ರ ಅಕಾಡೆಮಿ ಆಶ್ರಯದಲ್ಲಿ ಜೂನ್ 5 ರ ಭಾನುವಾರ ಸಂಜೆ 6-00 ಗಂಟೆಗೆ ಬೆಂಗಳೂರು ಜೆ. ಸಿ. ರಸ್ತೆಯಲ್ಲಿ ರವೀಂದ್ರ ಕಲಾಕ್ಷೇತ್ರ ಹಿಂಭಾಗದ ಸಂಸ ಬಯಲು ರಂಗಮಂದಿರದಲ್ಲಿ "ಗಾನವೆಂಬ ಗಂಧ ಚೆಲ್ಲಿ'...... "ಪುಟ್ಟಣ್ಣ ಕಣಗಾಲ್ ನೆನಪಿನ ಸಂಗೀತ ಸಂಜೆ" ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ಅಕಾಡೆಮಿ ಕಾರ್ಯದರ್ಶಿ ಹೆಚ್. ಬಿ. ದಿನೇಶ್ ತಿಳಿಸಿದ್ದಾರೆ.**

**ಸಂಗೀತ ಸಂಜೆ ಸಮಾರಂಭದಲ್ಲಿ ಕನ್ನಡ ಚಲನಚಿತ್ರರಂಗದ ಹಿರಿಯ ನಟ ಹಾಗೂ ರಾಜ್ಯ ವಸತಿ ಸಚಿವ ಡಾ. ಎಂ. ಹೆಚ್. ಅಂಬರೀಶ್, ಚಲನಚಿತ್ರ ನಿರ್ದೇಶಕ ಟಿ. ಎನ್. ಸೀತರಾಮ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಸಾ. ರಾ. ಗೋವಿಂದು, ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷ ಎಂ. ಎಸ್. ರಮೇಶ್, ಖ್ಯಾತ ಹಿನ್ನೆಲೆ ಗಾಯಕಿ ಶ್ರೀಮತಿ ಬಿ. ಆರ್. ಛಾಯಾ ಪಾಲ್ಗೊಳ್ಳುವರು. ಈ ಸಂದರ್ಭದಲ್ಲಿ ಶ್ರೀಮತಿ ನಾಗಲಕ್ಷ್ಮಿ ಪುಟ್ಟಣ್ಣ ಕಣಗಾಲ್ ಅವರಿಗೆ ಗೌರವಾರ್ಪಣೆ ಮಾಡಲಾಗುವುದು. ಶ್ರೀಮತಿ ಅಪರ್ಣ ಹಾಗೂ ಭ್ರಮೆ ತಂಡದಿಂದ ಪುಟ್ಟಣ್ಣ ಕಣಗಾಲ್ ಅವರು ನಿರ್ದೇಶಿಸಿದ ಚಲನಚಿತ್ರ ಗೀತೆಗಳ ಗಾಯನ ಏರ್ಪಡಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.**

ಬಾಬು::ಜಿಪಿಆರ್

# ಕಬ್ಬನ್ ಉದ್ಯಾನವನದಲ್ಲಿ ಈ ಭಾನುವಾರ

ಬೆಂಗಳೂರು, ಜೂನ್ 4 (ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ: 05-06-2016ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1. ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ" ಎಂಬ ಶೀರ್ಷಿಕೆಯಡಿ ಶ್ರೀ ಶರಣಪ್ಪ ಹೆಚ್. ಭಜಂತ್ರಿ ಮತ್ತು ತಂಡದವರು ಯಾಳಗಿ, ಸುರಪುರ ತಾಲೂಕು ಯಾದಗಿರಿ ಜಿಲ್ಲೆರವರಿಂದ ಹಿಂದೂಸ್ಥಾನಿ ವಚನ ಸಂಗೀತ, ದಾಸವಾಣಿ ಮತ್ತು ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
2. ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಸಂಧ್ಯಾರಾಗ" ಎಂಬ ಶೀರ್ಷಿಕೆಯಡಿ ಎನ್. ಮೇಘಶ್ರೀ ಮತ್ತು ತಂಡದವರು ನಂ.167, 1ನೇ ಅಡ್ಡ ರಸ್ತೆ, ಮರಿಯಪ್ಪನಪಾಳ್ಯ, ಬೆಂಗಳೂರುರವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
3. ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
4. ಉದ್ಯಾನವನದ ಆವರಣದಲ್ಲಿ ಜೈವಿಕ್ ಕೃಷಿಕ್ ಸೊಸೈಟಿ(ರಿ), ಲಾಲ್‌ಬಾಗ್, ಬೆಂಗಳೂರುರವರು ತಮ್ಮ ಮಾರಾಟ ಮಳಿಗೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ವಿವಿಧ ರೀತಿಯ ಹಣ್ಣುಗಳು ಮತ್ತು ಹಣ್ಣಿನ ಜ್ಯೂಸ್ ಮತ್ತು ಇತರೆ ಸಾವಯವ ಆಹಾರ ಪದಾರ್ಥಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
5. ಉದ್ಯಾನವನದ ಆವರಣದಲ್ಲಿ ಹಾಪ್‌ಕಾಮ್ಸ್, ಬೆಂಗಳೂರುರವರು ವಿವಿಧ Cut Fruits, Dry Fruits ಮತ್ತು ವಿವಿಧ ತಾಜಾ ಹಣ್ಣುಗಳು, ಪ್ಯಾಕ್ ಮಾಡಿದ ತಾಜಾ ತರಕಾರಿಗಳು ಹಾಗೂ ಹಣ್ಣಿನ ಜ್ಯೂಸ್‌ಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
6. ಉದ್ಯಾನವನದ ಆವರಣದಲ್ಲಿ ದಿ ನರ್ಸರಿಮೆನ್ ಕೋ-ಆಪರೇಟೀವ್ ಸೊಸೈಟಿ, ಲಾಲ್‌ಬಾಗ್, ಬೆಂಗಳೂರುರವರು ವಿವಿಧ ಅಲಂಕಾರಿಕ ಗಿಡಗಳ ಮಾರಾಟವನ್ನು ವಿಧಾನಸೌಧ ಮತ್ತು ಹೈಕೋರ್ಟ್ ಮುಂಭಾಗದ ಮೆಟ್ರೊ ನಿಲ್ದಾಣದ ಹತ್ತಿರ ಕೈಗೊಳ್ಳುತ್ತಾರೆ.

7. ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:

**I.**ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

- ಬೆಳಿಗ್ಗೆ 8.00 ಘಂಟೆಯಿಂದ 9.00 ಗಂಟೆಯವರೆಗೆ 1ನೇ ಬೆಟಾಲಿಯನ್, ಕೆ.ಎಸ್.ಆರ್.ಪಿ. ಪೊಲೀಸ್ ಇಲಾಖೆ ಬೆಂಗಳೂರುರವರಿಂದ ಪೊಲೀಸ್ ಬ್ಯಾಂಡ್ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ.
- ಬೆಳಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ ಸಹಯೋಗದೊಂದಿಗೆ ಶ್ರೀಮತಿ ಕೃತಿಕ ಮತ್ತು ತಂಡದವರಿಂದ ದಾಸವಾಣಿ ಗಾಯನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಗ್ಗೆ 9.00 ಗಂಟೆಯಿಂದ 10.00 ಗಂಟೆಯವರೆಗೆ ಶ್ರೀ ವಾಣಿ ವಿದ್ಯಾ ಕೇಂದ್ರ, ಮಾಚೋಹಳ್ಳಿ ಶಾಲಾ ಮಕ್ಕಳಿಂದ, ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**II.**ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ

- ಬೆಳಗ್ಗೆ 7.00 ರಿಂದ 10.00 ಘಂಟೆಯವರೆಗೆ ಯೋಗ ಪ್ರಾಣ ವಿದ್ಯಾ ಸಂಸ್ಥೆಯ **Soham Healing Center**, ಆರ್.ಟಿ. ನಗರ ಬೆಂಗಳೂರು ರವರ ವತಿಯಿಂದ ಪ್ರಾಣ ಚಿಕಿತ್ಸೆ ನೀಡುವ ಕಾರ್ಯಕ್ರಮವನ್ನು ಉಚಿತವಾಗಿ ಏರ್ಪಡಿಸಲಾಗಿದೆ.
- ಬೆಳಿಗ್ಗೆ 8.00 ರಿಂದ 10.00 ಗಂಟೆಯವರಿಗೆ ಓಪನ್ ಆರ್ಮ ಇಂಡಿಯಾ ಪೌಂಡೇಶನ, ನವಭಾರತ ನಿರ್ಮಾಣ ರವರ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಗಿಡನೆಡುವ ಹಾಗೂ ಉಚಿತವಾಗಿ ಗಿಡ ವಿತರಣೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಬಾಬು:ಜಿಪಿಆರ್

## ವರ್ಗಾವಣೆ

ಬೆಂಗಳೂರು, ಜೂನ್ 4 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರ ಸಚಿವಾಲಯದ ಸಂಸದೀಯ ವ್ಯವಹಾರಗಳ ಇಲಾಖೆಯಲ್ಲಿ ಸರ್ಕಾರದ ಕಾರ್ಯದರ್ಶಿಯನ್ನಾಗಿ ಕೆ. ದ್ವಾರಕನಾಥ್ ಬಾಬು ಅವರನ್ನು ನೇಮಿಸಿ ವರ್ಗಾವಣೆ ಮಾಡಲಾಗಿದೆ.

ಬಾಬು::ಜಿಪಿಆರ್

# ಮಕ್ಕಳ ಹಕ್ಕುಗಳ ಸಂರಕ್ಷಣೆ: ಮಾಧ್ಯಮಗಳು ಎಚ್ಚರ ವಹಿಸಲಿ

ಎನ್.ಆರ್.ವಿಶುಕುಮಾರ್

ಮಕ್ಕಳ ಹಕ್ಕುಗಳ ಸಂರಕ್ಷಣೆ ಸಾಮಾಜಿಕ ಜವಾಬ್ದಾರಿಯಾಗಿದ್ದು, ಅತ್ಯಂತ ತುರ್ತಾಗಿ ಆಗಬೇಕಾದ ಕೆಲಸ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕರಾದ ಎನ್.ಆರ್.ವಿಶುಕುಮಾರ್ ತಿಳಿಸಿದರು.

ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ಸಂರಕ್ಷಣಾ ಸಂಸ್ಥೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಮಾಧ್ಯಮ ಇಲಾಖೆ, ಬೆಂಗಳೂರು ಟೆಲಿವಿಷನ್ ಪತ್ರಕರ್ತರ ಸಂಘ, ವರ್ಬಿಡೆನ್ ಹಾಗೂ ಯುನಿಸೆಫ್ ಸಂಸ್ಥೆಗಳ ಸಹಯೋಗದಲ್ಲಿ ಮಾಧ್ಯಮದವರಿಗೆ ಆಯೋಜಿಸಲಾಗಿದ್ದ **'ಮಕ್ಕಳ ಹಕ್ಕುಗಳು ಮತ್ತು ಮಾಧ್ಯಮ'** ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮಕ್ಕಳ ಮೇಲಾಗುವ ದೌರ್ಜನ್ಯ ಪ್ರಕರಣಗಳನ್ನು ವರದಿ ಮಾಡುವಾಗ ಮಾಧ್ಯಮ ವರ್ಗ ಅತ್ಯಂತ ಎಚ್ಚರಿಕೆಯಿಂದ ವರ್ತಿಸಬೇಕು. ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವ ಅನೇಕ ಕಾನೂನುಗಳಿವೆ. ಅವನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಪ್ರಯತ್ನಗಳಾಗಬೇಕು. ಅವೆಲ್ಲಕ್ಕಿಂತ ಹೆಚ್ಚಾಗಿ ಮಾಧ್ಯಮದವರಿಗೆ ಸಾಮಾಜಿಕ ಕಳಕಳಿ ಅಗತ್ಯ. ದೌರ್ಜನ್ಯಕ್ಕೊಳಗಾಗಿರುವುದು ನಮ್ಮ ಮಗು ಎಂದುಕೊಂಡಾಗ ನಾವು ನೋಡುವ ದೃಷ್ಟಿಕೋನ ಬದಲಾಗುತ್ತದೆ ಎಂದರು. ಮಾಧ್ಯಮದವರಿಗಾಗಿ ಇಂಥ ಕಾರ್ಯಾಗಾರಗಳನ್ನು ವಿಭಾಗೀಯ ಹಾಗೂ ಜಿಲ್ಲಾ ಮಟ್ಟದಲ್ಲೂ ಹಮ್ಮಿಕೊಳ್ಳುವುದಾಗಿ ವಿಶುಕುಮಾರ್ ಭರವಸೆ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕರಾದ ಬಿ.ಎಂ. ವಿಜಯ್‌ಶಂಕರ್ ಮಾತನಾಡಿ ಸಮಾಜಕ್ಕೆ ವಿಷಯಗಳನ್ನು ಮುಟ್ಟಿಸುವಲ್ಲಿ ಮಾಧ್ಯಮಗಳ ಪಾತ್ರ ಹಿರಿದು. ಮಕ್ಕಳ ರಕ್ಷಣೆ ಕುರಿತಂತೆ ಸಾಕಷ್ಟು ಕಾರ್ಯಕ್ರಮಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಮ್ಮಿಕೊಂಡಿದೆ. ಆದರೆ, ಮಕ್ಕಳಿಗೆ ಕಾನೂನುಗಳಿಗಿಂತ ಹೆಚ್ಚಾಗಿ ಆರೈಕೆ ಮತ್ತು ಪ್ರೀತಿ ಹೆಚ್ಚು ಮುಖ್ಯ. ಮಕ್ಕಳ ಸಮಸ್ಯೆಗಳಿಗೆ ನಾವು ಸ್ಪಂದಿಸಬೇಕು ಎಂದ ಅವರು, ಸಮಾಜಘಾತುಕರು ಸಮಾಜದ ಸ್ವಾಸ್ಥ್ಯ ಕಲಕುತ್ತಿದ್ದಾರೆ. ಮಕ್ಕಳ ಮೇಲಾದ ದೌರ್ಜನ್ಯ ಪ್ರಕರಣಗಳನ್ನು ಬಿತ್ತರಿಸುವಾಗ ಮಾಧ್ಯಮಗಳು ಜವಾಬ್ದಾರಿಯಿಂದ ವರ್ತಿಸಬೇಕು. ಅಂಥ ಪ್ರಕರಣಗಳನ್ನು ವೈಭವೀಕರಿಸದೆ, ಕಾಳಜಿಯಿಂದ ವರದಿ ಮಾಡಬೇಕೆಂದರು. ಸುರಕ್ಷಿತ ಪರಿಸರ ಪ್ರತಿಯೊಂದು ಮಗುವಿನ ಹಕ್ಕು ಎಂದು ಅವರು ಹೇಳಿದರು.

ಯೂನಿಸೆಫ್ ಸಂಸ್ಥೆಯ ಮಕ್ಕಳ ಸುರಕ್ಷತೆ ತಜ್ಞ ಸೋನಿಕುಟ್ಟಿ ಜಾರ್ಜ್ ಮಾತನಾಡಿ ಮಾಧ್ಯಮ, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಒಟ್ಟಾಗಿ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಬೇಕು, ಮಾಧ್ಯಮಗಳು ಮಕ್ಕಳ ಪ್ರಪಂಚವನ್ನು ಬದಲಿಸುವ ಪ್ರಬಲ ಅಸ್ತ್ರಗಳಾಗಬೇಕು. ಈ ನಿಟ್ಟಿನಲ್ಲಿ ಮಾಧ್ಯಮ ಕೆಲಸ ಮಾಡುವ ಕುರಿತು ಆಲೋಚಿಸಬೇಕು. ಏಕೆಂದರೆ ಬದಲಾವಣೆಯ ಪ್ರಕ್ರಿಯೆಯಲ್ಲಿ ಮಾಧ್ಯಮಗಳದ್ದು ಮಹತ್ವದ ಪಾತ್ರ ಎಂದು ಅಭಿಪ್ರಾಯ ಪಟ್ಟರು.

ಪ್ರಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ಸಂರಕ್ಷಣಾ ಸಂಸ್ಥೆ ಶ್ರೀಮತಿ ನರ್ಮದಾ ಆನಂದ್ ಸಂಸ್ಥೆಯು ಕಳೆದ ಐದು ವರ್ಷಗಳಿಂದ ಮಕ್ಕಳ ರಕ್ಷಣೆಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ರಾಜ್ಯಾದ್ಯಂತ ಮಾಧ್ಯಮಗಳ ಮೂಲಕ ಮಕ್ಕಳಿಗೆ ಸುರಕ್ಷಿತ ಜಾಲ ನಿರ್ಮಿಸುವ ಉದ್ದೇಶವನ್ನು ಹೊಂದಿದೆ. ಈ ನಿಟ್ಟಿನಲ್ಲಿ ಸಂಸ್ಥೆ ನಿರಂತರವಾಗಿ ಶ್ರಮಿಸುತ್ತಿದೆ ಎಂದರು.

ಸಿಡಬ್ಲ್ಯೂಸಿ ನಿರ್ದೇಶಕಿ ಕವಿತಾ ರತ್ನ, ಯೂನಿಸೆಫ್ ಸಂಸ್ಥೆಯ ಸುಚಿತ್ರಾ ರಾವ್ ಸೇರಿದಂತೆ ಮಾಧ್ಯಮದವರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಅಶ್ವಿನಿಪತಿ

# ಸರ್ಕಾರಿ ಭೂ ಒತ್ತುವರಿ ಕಾರ್ಯಾಚರಣೆ

ಬೆಂಗಳೂರು, ಜೂನ್ 4 (ಕರ್ನಾಟಕ ವಾರ್ತೆ)

ಬೆಂಗಳೂರು ನಗರ ಜಿಲ್ಲೆಯಲ್ಲಿ ಸರ್ಕಾರಿ ಜಮೀನುಗಳ ಒತ್ತುವರಿ ತೆರವುಗೊಳಿಸುವ ಕಾರ್ಯಾಚರಣೆಯನ್ನು ಕೈಗೊಂಡಿದ್ದು ಅದರಂತೆ **ಬೆಂಗಳೂರು ದಕ್ಷಿಣ ತಾಲ್ಲೂಕು**, ಕೆಂಗೇರಿ ಹೋಬಳಿ ಬಿ.ಎಂ.ಕಾವಲ್ ಗ್ರಾಮದ ಸರ್ವೆ ನಂ. 132ರ ಸರ್ಕಾರಿ ಜಮೀನು ಪೋಡಿಯಾಗಿ ರೀ.ಸ. ನಂ. 288/1, 288/2, 288/3ರಲ್ಲಿ ಒಟ್ಟು 50–00 ಎಕರೆ ಜಮೀನು ಶ್ರೀ ಮಾರಪ್ಪ ನವರಿಗೆ ಮಂಜೂರಿಯಾಗಿದ್ದು ಮೂಲ ಮಂಜೂರಾತಿಯನ್ನು ರದ್ದುಪಡಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿರುತ್ತದೆ. ತಾವರೆಕೆರೆ ಹೋಬಳಿ, ತಾವರೆಕರೆ ಗ್ರಾಮದ ಸರ್ಕಾರಿ ಸರ್ವೆ ನಂ. 125 ರಲ್ಲಿ 25–00 ಎಕರೆ ಜಾಗವನ್ನು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡಿದ್ದವರಿಗೆ ತಹಶೀಲ್ದಾರ್ ನೋಟೀಸು ನೀಡಿ ಜಮೀನನ್ನು ದಿನಾಂಕ **03-06-2016** ರಂದು ಶ್ರೀ. ವಿ. ಶಂಕರ್, ಜಿಲ್ಲಾಧಿಕಾರಿಗಳು ರವರ ನಿರ್ದೇಶನದಂತೆ ತಹಶೀಲ್ದಾರ್, ಎಸ್. ಎಂ. ಶಿವಕುಮಾರ್ ಹಾಗು ಅವರ ಸಿಬ್ಬಂದಿಯೊಡನೆ ಅಂದಾಜು **225.00 ಕೋಟಿ** ಮೌಲ್ಯದ ಸರ್ಕಾರಿ ಜಮೀನನ್ನು ತೆರವುಗೊಳಿಸಲಾಯಿತು.

ಅದೇ ರೀತಿ **ಬೆಂಗಳೂರು ಉತ್ತರ (ಅಪರ) ತಾಲ್ಲೂಕು** ಜಾಲ ಹೋಬಳಿ, ಬಾಗಲೂರು ಗ್ರಾಮದ ಸರ್ವೆ ನಂ. 379/1 ರಲ್ಲಿ 0–20 ಗುಂಟೆ, ಸರ್ವೆ ನಂ. 375 ರಲ್ಲಿ 0–24 ಗುಂಟೆ, ಸರ್ವೆ ನಂ. 279/3 ರಲ್ಲಿ 2–10 ಎ/ಗುಂಟೆ, ಸರ್ವೆ ನಂ. 272/7 ರಲ್ಲಿ 2–00 ಎಕರೆ, ಸರ್ವೆ ನಂ. 263/1 ರಲ್ಲಿ 8–00 ಎಕರೆ, ಸರ್ವೆ ನಂ. 175/2 ರಲ್ಲಿ 3–14 ಎ/ಗುಂಟೆ, ಸರ್ವೆ ನಂ. 162 ರಲ್ಲಿ 0–10 ಗುಂಟೆ, ಸರ್ವೆ ನಂ. 121 ರಲ್ಲಿ 0–20 ಗುಂಟೆ, ಚಾಗಲಹಟ್ಟಿ ಗ್ರಾಮದ ಸರ್ವೆ ನಂ. 42/2 ರಲ್ಲಿ 1–36 ಎ/ಗುಂಟೆ, ಸರ್ವೆ ನಂ. 50/1 ರಲ್ಲಿ 1–09 ಎ/ಗುಂಟೆ, ಮಾರೇನಹಳ್ಳಿ ಗ್ರಾಮದ ಸರ್ವೆ ನಂ. 169 ರಲ್ಲಿ 3–18 ಎ/ಗುಂಟೆ,

ಸರ್ವೆ ನಂ. 167/1 ರಲ್ಲಿ 0–32 ಗುಂಟೆ, 167/2 ರಲ್ಲಿ 3–08 ಎ/ಗುಂಟೆ, ಸರ್ವೆ ನಂ. 173/ಪಿ8 ರಲ್ಲಿ 0–20 ಗುಂಟೆ, ಒಟ್ಟು 28–21 ಹಾಗೂ ಮಾರೇನಹಳ್ಳಿ ಗ್ರಾಮದ ಸರ್ವೆ ನಂ. 182 ರಲ್ಲಿ ಸರ್ಕಾರಿ ಗೋಮಾಳ 30–00 ಎಕರೆ ಜಾಗದಲ್ಲಿ ಸುತ್ತಮುತ್ತಲ ಗ್ರಾಮಸ್ಥರು ಅನಧಿಕೃತ ಗಣಿಗಾರಿಕೆ ನಡೆಸುತ್ತಿದ್ದನ್ನು ತಡೆಹಿಡಿದು ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲಾಯಿತು. ಒತ್ತುವರಿ ಮಾಡಿಕೊಂಡಿದ್ದವರಿಗೆ ತಹಶೀಲ್ದಾರ್ ನೋಟೀಸು ನೀಡಿ ಜಮೀನನ್ನು ದಿನಾಂಕ **03–06–2016** ರಂದು ಶ್ರೀ. ವಿ. ಶಂಕರ್, ಜಿಲ್ಲಾಧಿಕಾರಿಗಳು ರವರ ನಿರ್ದೇಶನದಂತೆ ತಹಶೀಲ್ದಾರ್. ಬಾಲಪ್ಪ ಹಂದಿಗುಂದ ಹಾಗೂ ಅವರ ಸಿಬ್ಬಂದಿಯೊಡನೆ ಅಂದಾಜು **174.00** ಕೋಟಿ ಮೌಲ್ಯದ ಸರ್ಕಾರಿ ಜಮೀನನ್ನು ತೆರವುಗೊಳಿಸಲಾಯಿತು.

ಜಿಲ್ಲೆಯ 2 ತಾಲ್ಲೂಕುಗಳಲ್ಲಿ ಏಕ ಕಾಲದಲ್ಲಿ ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಿ, ಜಿಲ್ಲೆಯ ವಿಭಾಗಾಧಿಕಾರಿಗಳು, ಬಿ.ಎಂ.ಟಿ.ಎಫ್. ಅಧಿಕಾರಿಗಳು, ಪೋಲೀಸ್ ಅಧಿಕಾರಿಗಳು, ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರ್, ರಾಜಸ್ವ ನಿರೀಕ್ಷಕರು ಹಾಗೂ ಅವರ ಸಿಬ್ಬಂದಿ ವರ್ಗದವರ ಸಹಯೋಗದಿಂದಿಗೆ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿರುತ್ತದೆ. **ಒಟ್ಟು ತೆರವುಗೊಳಿಸಿದ ವಿಸ್ತೀರ್ಣ: 133.21 ಎಕರೆ/ಗುಂಟೆ ಒಟ್ಟು ಮೌಲ್ಯ 399.00 ಕೋಟಿ ರೂ.**

**ಮಮತ ಎಂ.ಆರ್.**

## ಒತ್ತುವರಿ ಭೂಮಿಯಲ್ಲಿ ಹಸಿರೀಕರಣ

ಬೆಂಗಳೂರು, ಜೂ.4: ಬೆಂಗಳೂರು ನಗರ ಜಿಲ್ಲೆಯಲ್ಲಿ ಒತ್ತುವರಿಯಿಂದ ತೆರವುಗೊಳಿಸಬೇಕಾದ ಒಟ್ಟು 17950–33ಎ/ಗುಂ ಸರ್ಕಾರಿ ಭೂಮಿಯನ್ನು ಮುಕ್ತಗೊಳಿಸಲು ಕಾರ್ಯ ಯೋಜನೆಯನ್ನು ಸಿದ್ದಪಡಿಸಿಕೊಂಡು ತೆರವು ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ವಿ.ಶಂಕರ್ ಅವರು ತಿಳಿಸಿದ್ದಾರೆ.

ಮೊದಲ ಹಂತದಲ್ಲಿ ತೆರವುಗೊಳಿಸಿದ ಸರ್ಕಾರಿ ಭೂಮಿ 5211–00 ಎ/ಗುಂ, ಎರಡನೇ ಹಂತದಲ್ಲಿ ಹಕ್ಕುಗಳನ್ನು ಸರ್ಕಾರದ ಲೆಕ್ಕಕ್ಕೆ ತಂದು ತೆರವುಗೊಳಿಸಲಾಗುತ್ತಿರುವ ಭೂಮಿ 8204–17ಎ/ಗುಂ, ಕೆರೆ ಒತ್ತುವರಿಯಿಂದ ತೆರವುಗೊಳಿಸಬೇಕಾಗಿರುವ ಭೂಮಿ 4535–16ಎ/ಗುಂ ಸೇರಿದಂತೆ ಒಟ್ಟು 17950 –33 ಎ/ಗುಂ ಸರ್ಕಾರಿ ಭೂಮಿಯನ್ನು ಒತ್ತುವರಿಯಿಂದ ಮುಕ್ತಗೊಳಿಸಲು ಕಾರ್ಯ ಯೋಜನೆಯನ್ನು ಸಿದ್ದಪಡಿಸಿಕೊಂಡು ತೆರವು ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಒಟ್ಟು ತೆರವುಗೊಳಿಸಲಾದ –ತೆರವುಗೊಳಿಸಲಾಗುತ್ತಿರುವ 17,950 ಎಕರೆ ಭೂಮಿಯಲ್ಲಿ ಎಕರೆಯೊಂದಕ್ಕೆ ಗರಿಷ್ಟ 40 ಸಸಿಗಳಂತೆ ಏಳು ಲಕ್ಷ ಸಸಿಗಳನ್ನು ನೆಡಲು ಅವಕಾಶವಿದ್ದು, ಈ ಮುಂಗಾರಿನ ಪ್ರಾರಂಭದಿಂದ ಸೆಪ್ಟೆಂಬರ್ ಅಂತ್ಯದವರೆಗೆ ಕನಿಷ್ಟ ಐದು ಲಕ್ಷ ಸಸಿಗಳನ್ನಾದರೂ ನೆಡಲು ಜಿಲ್ಲಾಡಳಿತ ಯೋಜಿಸಿದೆ ಎಂದು ಅವರು ತಿಳಿಸಿದ್ದಾರೆ.

ಈ ಉದ್ದೇಶಕ್ಕಾಗಿ ಜಿಲ್ಲಾಡಳಿತ-ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ಈ ಕಾರ್ಯವನ್ನು ವಿದ್ಯುಕ್ತವಾಗಿ 'ವಿಶ್ವ ಪರಿಸರ ದಿನ'ದಂದು ಮಾನ್ಯ ಮುಖ್ಯಮಂತ್ರಿಗಳಿಂದ ಪ್ರಾರಂಭಿಸಿ ಕೊಡಲು ಕೋರಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮಮತ ಎಂ.ಆರ್.